ಸೃಜನಿ

SRUJANI: Indian Journal of Innovative Research and Development (SIJIRD)
Volume-3 Issue 4, September-October 2024, Pp. 144-148
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಕುವೆಂಪು ಕಥೆಗಳಲ್ಲಿ ಸ್ತ್ರೀ ಸಂವೇದನೆ

**ಮಧುಮತಿ ಯು.ಜಿ[1] ಮತ್ತು ಡಾ. ಎ. ರಂಗಸ್ವಾಮಿ[2]**

[1]ಸಂಶೋಧನಾ ವಿದ್ಯಾರ್ಥಿ, [2]ನಿವೃತ್ತ ಪ್ರಾಧ್ಯಾಪಕರು

ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮುಕ್ತಗಂಗೋತ್ರಿ, ಮೈಸೂರು.

**Abstract:**

*ಕುವೆಂಪುರವರ ಕಥೆಗಳ ವಿಸ್ತಾರ ನೋಡುವಾಗ ಅದು ಆಲಯದಿಂದ ಬಯಲಿನವರೆಗೂ ಹಬ್ಬಿರುವುದು ಕಂಡು ಬರುತ್ತದೆ. ಒಂದು ಕಡೆ ಮನೆಯೊಳಗೆ ನಲುಗುವ ಮನಸುಗಳ ಕಥೆ ಹೇಳುತ್ತಲೇ ಹೊರಗಿನ ವ್ಯವಹಾರಿಕ ಪ್ರಪಂಚದ ತಲ್ಲಣಗಳನ್ನೂ ಕಥೆಗೆ ಹೊತ್ತು ತರುತ್ತಾರೆ. ಇನ್ನು ತಮ್ಮ ಕಥೆಗಳಲ್ಲಿ ಅವರು ಸೃಷ್ಟಿಸುವ ಹೆಣ್ಣು ಪಾತ್ರಗಳಂತೂ ಕಾಡುವಂಥವು. ಸನ್ಯಾಸಿ ಮತ್ತು ನನ್ನ ದೇವರು ಕಥೆಗಳ ಹೆಣ್ಣುಮಕ್ಕಳು ಬಹಳ ಕಾಲ ಮನಸಿನಲ್ಲುಳಿಯುವಂಥವರು.*

**Keywords:** *ಕನ್ನಡ ಸಾಹಿತ್ಯ, ಕುವೆಂಪು, ಸ್ತ್ರೀ ಸಂವೇದನೆ, ಸನ್ಯಾಸಿ, ನನ್ನ ದೇವರು*

## ಪೀಠಿಕೆ

"ಕುವೆಂಪುರವರ ಪ್ರಕಾರ ಇಹಪರಗಣ ಸಾಧನೆಗೆ ಪರಸ್ಪರರ ನೆರವು ಅತ್ಯವಶ್ಯಕ ಸ್ತ್ರೀವಾದಿ ಚಿಂತನೆಗಳು ಆರಂಭವಾಗುವ ಮುನ್ನವೇ ಅವರು ತಮ್ಮ ಸಾಹಿತ್ಯದಲ್ಲಿ ಸಾಕಷ್ಟು ಸ್ತ್ರೀಪರ ಚಿಂತನೆಗಳನ್ನು ಸ್ತ್ರೀ ಜೀವನದ ಆಂತರಿಕ ಸತ್ವ ಸಾಮರ್ಥ್ಯಗಳನ್ನು ವಿಶೇಷ ಕಾಳಜಿಯಿಂದ ಅಭಿವ್ಯಕ್ತಗೊಳಿಸಿದ್ದಾರೆ."[1]

1940ರಲ್ಲಿ ಮೊದಲ ಮುದ್ರಣವನ್ನು ಕಂಡಂತಹ ನನ್ನ ದೇವರು ಮತ್ತು ಇತರ ಕಥೆಗಳು, ಈವರೆಗೆ ಹದಿನೆಂಟು ಮುದ್ರಣಗಳನ್ನು ಕಂಡಿದೆ. ಈ ಪುಸ್ತಕದಲ್ಲಿ ನನ್ನ ದೇವರು, ಸಾಲದ ಮಗು, ಆದರ್ಶ ಸಾಧನೆ, ಔದಾರ್ಯ, ಗಂಟು ಅಥವಾ ಗುಪ್ತದಾನ, ಮೀನಾಕ್ಷಿಯ ಮನೆಮೇಷ್ಟರು, ಧನ್ವಂತರಿಯ ಚಿಕಿತ್ಸೆ ಹಾಗೂ ವೈರಾಗ್ಯದ ಮಹಿಮೆ ಹೀಗೆ ಒಟ್ಟು ಎಂಟು ಕಥೆಗಳನ್ನು ಒಳಗೊಂಡಿದೆ. ಈ ಕಥೆಗಳಲ್ಲಿ ಕುಟುಂಬದಲ್ಲಿನ ಕಷ್ಟ ಸುಖಗಳ ಕುರಿತಾಗಿ ನವಿರಾಗಿ ವಿವರಿಸಿದ್ದಾರೆ. ಒಂದು ಸಂಸಾರದಲ್ಲಿರುವ ವ್ಯಕ್ತಿಗಳ ನಡುವಿರುವ ಸಂಬಂಧಗಳ ಭಾವನೆಯನ್ನು ಈ ಕೃತಿಯಲ್ಲಿ ವರ್ಣಿಸಲಾಗಿದೆ.

ನನ್ನ ದೇವರು ಕಥೆಯಲ್ಲಿ ಚಿಕ್ಕ ವಯಸ್ಸಿನಲ್ಲಿ ವಿವಾಹವಾಗಿ ಆಕಾಲಿಕ ಮರಣಕ್ಕೆ ತುತ್ತಾಗುವ ಪತಿಯನ್ನು ನೆನೆದು ಗೋಳಾಡುವ ಹೆಣ್ಣಿನ ಪಾತ್ರವಿದೆ. ತನ್ನ ಪತಿ ಹಾಸಿಗೆಯಲ್ಲಿ ನರಳುವುದನ್ನು ಕಂಡು "ಭಗವಂತ ನನ್ನ ತಾಳಿ ಕಾಪಾಡು" ಎಂದು ಗೋಳಾಡುವಳು. ಪತಿಯ ಮರಣ ನಂತರ "ನನ್ನ ಜೀವನ ಪ್ರದೀಪ ನಂದಿ ಹೋಯಿತು" ಎಂದು ಪತಿಯ ಶವದ ಮೇಲೆ ಬಿದ್ದು ಹೊರಳಾಡುವಳು.

---

[1]ದೇಜಗೌ. *ಕುವೆಂಪು ಸಾಹಿತ್ಯ ವಿಲೋಕನ.* ಪುಟ. 152

***Please cite this article as:*** ಮಧುಮತಿ ಯು.ಜಿ. ಮತ್ತು ಎ ರಂಗಸ್ವಾಮಿ. (2024). ಕುವೆಂಪು ಕಥೆಗಳಲ್ಲಿ ಸ್ತ್ರೀ ಸಂವೇದನೆ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 3(4), 144–148

ಪತಿಯ ಮರಣದ ನಂತರ ತನ್ನ ಭಾವನವರ ಕಡೆ ಆಕರ್ಷಿತಳಾದಾಗ ಅವರ ಅಮೋಘ ವ್ಯಕ್ತಿತ್ವದಿಂದ ತನ್ನ ತಪ್ಪಿನ ಅರಿವಾಗಿ "ನನ್ನ ದೇವರೇ ನಿನಗೆ ಸಹಸ್ರ ನಮಸ್ಕಾರ" ಎಂದು ಕೈ ಮುಗಿಯುವಳು.

ಆದರ್ಶ ಸಾಧನೆ ಕಥೆಯಲ್ಲಿ ಪತ್ನಿ ರೋಹಿಣಿಯನ್ನು ಅಪಾರವಾಗಿ ಪ್ರೀತಿಸುತ್ತಿದ್ದ ಚಂದ್ರ ಅವಳ ಮರಣದ ನಂತರ ತನ್ನ ನಾದಿನಿಯನ್ನು ಮದುವೆಯಾಗುವನು. ಸೀತೆಯಿಂದ ಮೋಹಿತನಾದ ಚಂದ್ರನನ್ನು ಕುರಿತು ರೋಹಿಣಿ "ನೀನು ಮಿಥ್ಯಾಚಾರಿ! ನೀನು ಪತಿತ! ನೀನು ಮೋಸಗಾರ ಎಂದು ಟೀಕಿಸುವಂತೆ ಭಾಸವಾಗಿ ದ್ವಂದ್ವ ಮನೋಭಾವಕ್ಕೆ ಒಳಗಾಗುವನು.

"ಔದಾರ್ಯ" ಕಥೆಯಲ್ಲಿ ಮಲತಾಯಿಯೊಬ್ಬಳು ತನ್ನ ಗಂಡನ ಹಿರಿಯ ಹೆಂಡತಿಯ ಮಗುವನ್ನು ಅನಾದರದಿಂದ ಕಾಣುವ ಪಾತ್ರವಿದೆ. ವೃತ್ತಿಯಲ್ಲಿ ಉಪಾಧ್ಯಾಯರಾಗಿದ್ದ ಡೇವಿಡ್ ಮಾಸ್ತರು ಹಿರಿಯ ಪತ್ನಿಯ ಮರಣದ ನಂತರ ಮಗುವನ್ನು ನೋಡಿಕೊಳ್ಳಲು ಮರು ವಿವಾಹವಾಗುವರು. ಅವಳು ಸಹ ಶಿಕ್ಷಕಿಯಾಗಿದ್ದರು. ಮತ್ತೊಬ್ಬರ ಜೊತೆ ದುಷ್ಟ ಸಂಬಂಧ ಹೊಂದಿದ್ದಳು. ಅವಳು ಮಗುವಿನ ಮೇಲೆ ಅನಾಸಕ್ತಿ ತೋರಿದ್ದರಿಂದ ಮಗು ಅಕಾಲಿಕ ಮರಣಕ್ಕೆ ತುತ್ತಾಗುವುದು. ಇಲ್ಲಿ ವಿಭಿನ್ನ ಸ್ತ್ರೀ ಪಾತ್ರ ಚಿತ್ರತವಾಗಿದೆ.

'ಗಂಟು' ಅಥವಾ ಗುಪ್ತಧನ ಕಥೆಯಲ್ಲಿ ಮಸರೂರು ಮಂಜಣ್ಣ ತನ್ನ ಅತಿ ಆಸೆಯಿಂದ ಇದ್ದ ಹಣವನ್ನು ಕಳೆದುಕೊಂಡು ಬೀದಿ ಪಾಲಾಗುವನು. "ಕಾಸಿಗೆ ಕಾಸು ಗಂಟು ಹಾಕಿ, ಹೊಟ್ಟೆಗೆ ಬೆನ್ನು ಅಂಟು ಹಾಕಿ" ಹಣವನ್ನು ಸಂಪಾದನೆ ಮಾಡಿರುತ್ತಾನೆ. ಭೈರಾಗಿಯ ಮೋಸಕ್ಕೆ ತುತ್ತಾಗಿ ಪತ್ನಿಯ ಮೈ ಮೇಲಿನ ತಾಳಿಯೊಂದನ್ನು ಬಿಟ್ಟು ಉಳಿದೆಲ್ಲವನ್ನು ಕಳೆದುಕೊಳ್ಳುವನು. ಅವಳ ಗೋಳಾಟ ಕಲ್ಲನ್ನು ಕರಗಿಸುವಂತಿತ್ತು. ಅವಳು ಬಾಯಿ ಬಾಯಿ ಬಡೆದುಕೊಂಡು ಗಟ್ಟಿಯಾಗಿ ಗೋಳಿಡುತ್ತಿದ್ದಳು. ಅವಳ ಬೊಬ್ಬೆಗೆ ಈಡಿ ಊರೇ ಅವರ ಮನೆಯ ಮುಂದೆ ಸೇರಿತ್ತು.

"ಕುವೆಂಪುರವರ ಕಥೆಗಳಲ್ಲಿನ ಮತ್ತೊಂದು ವಿಷೇಶ ಮಹತ್ವದ ಗುಣ ಕಾವ್ಯತ್ವ. ಕಥೆಗಳ ಪರಿಸರವನ್ನು ನಿರ್ಮಿಸುವಾಗ, ಪಾತ್ರ ಮನೋಧರ್ಮವನ್ನು, ಸೂಕ್ಷ್ಮಭಾವಗಳನ್ನು ಬಣ್ಣಿಸುವಾಗ ಅವರ ಕಥೆ ಕಾವ್ಯ ವಿಮಾನವನ್ನೇರಿ ಆನಂದಯಾನ ಮಾಡುತ್ತದೆ. ಸಂಗೀತ ಸಂಗಿಯಾಗಿ ಲಲಿತ ಪ್ರಾಸ ವೈಭವದಿಂದ ಮೊರೆಯುತ್ತದೆ."[2]

ಮೀನಾಕ್ಷಿಯ ಮನೆ ಮೇಷ್ಟರು ಇದು ಹರೆಯದ ಹೆಣ್ಣು ಹುಡುಗಿಯ ಚಿತ್ರಣವಾಗಿದೆ. ದಿನವು ಮನೆ ಪಾಠಕ್ಕಾಗಿ ಸಿದ್ಧವಾಗಿ ಬರುತ್ತಿದ್ದ ಮೀನಾಕ್ಷಿ ಗುರುಗಳನ್ನು ಬೇಗ ಬಂದರೆ 'ಕಾಯ್ಕೊಂಡು ಕೂತಿರಲಿ' ಎಂದು ಹೇಳುತ್ತಿದ್ದಳು. ಗುರುಗಳು ಬೇರೆ ಯಾವ ವಿದ್ಯಾರ್ಥಿಗಳು ನಿನ್ನಷ್ಟು ಒಳ್ಳೆಯವರಲ್ಲ ಎನ್ನುವ ಮಾತಿಗೆ ಮೀನು ಗಾಳದ ಹುಳುವನ್ನು ಕಚ್ಚಿ ನುಂಗುವಂತೆ ಮಾಸ್ಟರ್‌ರನ್ನು ಪ್ರಶಂಸಿದ್ದಳು. ಮದುವೆಯ ವಿಚಾರ ಬಂದಾಗ ಮಾಸ್ಟರನ್ನು ಪ್ರಶಂಸನೀಯ ದೃಷ್ಟಿಯಿಂದ ನೋಡಿದ್ದೇನೋ ನಿಜ. ತನ್ನ ವಧೂತ್ವಕ್ಕೆ ಮೇಷ್ಟ್ರಲ್ಲಿ ವರತ್ವವನ್ನು ಊಹಿಸಿ ತಾತ್ಕಾಲಿಕವಾದ ಬಾಲ್ಯ ಸಹಜವಾದ ನಲ್ಮೆಗೆ ಮಾರು ಹೋಗಿದ್ದರು ಆಕೆಗೆ ಮದುವೆ ನಿಶ್ಚಯವಾದ ಮೇಲೆ ಇತರ ತರುಣರಂತೆ ಮಾಸ್ಟರ್ ಅನಾಮದೇಯರು. ಪತಿಯ ತನ್ನ ನಿರ್ಣಯವು ವಿಧಿಗೆ ಸೇರಿತ್ತು. ತಂದೆ ತಾಯಿಗಳು ಒಪ್ಪಬೇಕು, ಪತಿಯಾಗುವವನು ಒಪ್ಪಬೇಕು, ಬಂಧುಗಳು ಸಮಾಜವು ಒಪ್ಪಬೇಕು, ಕೊನೆಗೆ ಸರ್ಕಾರ ಒಪ್ಪಬೇಕಿತ್ತು ಈಗಿತ್ತು ಅವಳ ಮನಸ್ಸು. ವಿವಾಹದ ವಿಷಯದಲ್ಲಿ ಸ್ತ್ರೀಯ ಮನೋಮಯ ಕೋಶವು ಪುರುಷನ ಮನೋಮಯ ಕೋಶಕ್ಕಿಂತಲೂ ಹೆಚ್ಚು ಅಸ್ಪಷ್ಟವಾದದ್ದು ಮಂಜಾದುದು. ನಮ್ಮ ಮೀನಾಕ್ಷಿ ಅನಂತ ಕಲ್ಯಾಣಮಯಿ ಆಗಿರಲಿಲ್ಲ ಅಪಾರ ಕ್ಲೇಶಕಾರಿಣಿ

[2] ಶ್ರೀಕಂಠ ಕೂಡಿಗೆ. *ಕುವೆಂಪು ಕಥಾ ಕಥನ.* ಪುಟ. 112

ಆಗಿರಲಿಲ್ಲ. ಅವಳು ಸಾಧಾರಣ ಸ್ತ್ರೀಯಾಗಿದ್ದಳು. ವಿವಾಹದ ನಂತರವೂ ಮೀನಾಕ್ಷಿ ಉತ್ತಮ ಗೃಹಿಣಿಯ ಜೀವನ ಸಾಗಿಸಿ ಮಾದರಿಯಾಗಿದ್ದಳು.

ಧನ್ವಂತರಿಯ ಚಿಕಿತ್ಸೆ ಬಡ ರೈತನ ಕಥೆಯಾಗಿದೆ ಆಧುನಿಕ ನಾಗರಿಕತೆ ಬರದಲ್ಲಿ ನೊಂದ ರೈತ ಮತ್ತು ಅವನ ಪತ್ನಿಯ ನೋವಿನ ಜೀವನವಿದೆ. ಋಷಿಗಳು ರೈತನ ನರಳಾಟ ಕೇಳಿ ಬಂದಾಗ ರೈತನ ಹೆಂಡತಿ ಅವರನ್ನು ಕಂಡೊಡನೆ ಚೀತ್ಕಾರ ಮಾಡಿ ಕೈಜೋಡಿಸಿಕೊಂಡು "ದಮ್ಮಯ್ಯ ನಿಮ್ಮ ಕಾಲಿಗೆ ಬೀಳ್ತೀನಿ. ಈಗ ದುಡ್ಡಿಲ್ಲ. ನನ್ನ ಗಂಡಗೆ ಕಾಯಿಲೆ ಗುಣವಾದ ಕೂಡಲೆ ಸಾಲ ಮಾಡಿ ಆದರೂ ತಂದು ಕೊಡ್ತಾರೆ ! ಕೋಸನ್ನು ನೋಡಿ ಆದರೂ ಕನಿಕರ ತೋರಿಸಿ" ಎಂದು ರೋಧಿಸ ತೊಡಗಿದಳು ಅವಳಿಗೆ ವೈದ್ಯರ ಮೇಲೆ ನಂಬಿಕೆ ಇರಲಿಲ್ಲ ಪುರೋಹಿತರನ್ನು ಕರೆಯಿಸಬೇಕೆಂದು ಸೂಚಿಸಿದಳು ಏಕೆಂದರೆ ಯಾವುದೋ ರಣ ಪಿಶಾಚಿಯ ಚೇಷ್ಟೇಯೆ ಗಂಡನ ರೋಗಕ್ಕೆ ಕಾರಣವೆಂದು ನಂಬಿದ್ದಳು. ಇಲ್ಲಿ ಬಡ ಹೆಣ್ಣು ಮಗಳ ಗೋಳು ಧ್ವನಿತವಾಗಿದೆ.

ಅಟ್ಟಿದರೆ ಓಡುತ್ತದೆ, ಬಿಟ್ಟರೆ ಹಿಂಬಾಲಿಸುತ್ತದೆ ಈ ಕಥೆಯಲ್ಲಿ ರಾಯಚಾರಣನ ಗೋಸ್ವಾಮಿಯ ನಾಲ್ಕನೇ ಪತ್ನಿಯನ್ನು ಮೋಯಿಸುವ ಕಥೆ ಇದೆ. ಅತೀ ಕಿರಿಯ ವಯಸ್ಸಿನ ತರುಣಿ ಮುದುಕನನ್ನು ವಿವಾಹವಾಗಿ ಅವನು ದಿವಂಗತನಾದಾಗ ತರುಣ ವಿಧವೆ ಪತಿ ವಿಯೋಗದ ದುಃಖ ಶಮನಾರ್ಥವಾಗಿಯೂ, ಆತ್ಮ ಕ್ಷೇಮಕ್ಕಾಗಿಯೂ, ರಾಯಚರಣನಿಗೆ ಮೊರೆಹೋಗುವಳು. ಉಳಿದ ವಿಧವೆಯರು ದೇವರ ಮೊರೆ ಹೋಗುವರು. ರಾಧಾದಾಸಿಗೆ ಕೃಷ್ಣದಾಸನ ಮಾತನ್ನು ಹೇಳಿದ ನುಡಿಗಳನ್ನು ಕೇಳಿ ದಾಸಿತ್ವವು ಸಂಪೂರ್ಣವಾಗಿ ಅಳಿಸಿ ಹೋಯಿತು. ಅವಳು ತಾನು ದೇವರೊಂದಿಗೆ ಐಕ್ಯವಾಗುತ್ತಿದ್ದೇನೆಂದು ಮಹಾದಾನಂದದ ಹೊಳೆಯಲ್ಲಿ ಕೊಚ್ಚಿ ಹೋದಳು.

ಡಾ. ವೇಣುಗೋಪಾಲರಾಯರು ಕುವೆಂಪು ಕಥೆಗಳನ್ನು ಅಧ್ಯಯನ ಮಾಡಿ ಶ್ರೀ ಕುವೆಂಪು ನವೋದಯ ಸಾಹಿತ್ಯ ಯುಗದ ಶ್ರೇಷ್ಠ ಕಥೆಗಾರರಲ್ಲಿ ಒಬ್ಬರು ಆದರೆ ಅವರ ಧೀಮಂತ ಪ್ರತಿಭೆ ಮಹಾ ಕಾವ್ಯ ಕಾದಂಬರಿಗಳನ್ನು ಸಹಜವಾಗಿ ಬರೆದಿದ್ದರಿಂದ ಅಲ್ಲಿಯ ಪಾಂಚಜನ್ಯದ ದುಂದುಭಿಯಲ್ಲಿ ಈ ಕೊಳಲ ಗಾನ ಒಮ್ಮೊಮ್ಮೆ ಕ್ಷೀಣವಾದಂತೆ ತೋರುತ್ತದೆ ಎಂದಿದ್ದಾರೆ.

"ಕುವೆಂಪುರವರ ಕಥಾಲೋಕದ ಯಾವುದೇ ಕಥೆಯನ್ನು ತೆಗೆದುಕೊಂಡರು ಪ್ರಕೃತಿಯ ವರ್ಣನೆ ಅದರಲ್ಲಿ ಹಾಸುಹೊಕ್ಕಾಗಿ ಅರ್ಥಪೂರ್ಣವಾಗಿ, ಧ್ವನಿ ರಮ್ಯವಾಗಿ ಕಾಣಿಸಿಕೊಂಡು ಓದುಗರ ಮನಸ್ಸಿನ ಮೇಲೆ ಅಚ್ಚಳಿಯದ ಪ್ರಭಾವ ಬೀರುವುದನ್ನು ಕಾಣುತ್ತೇವೆ. ಕಥೆಗಾರರಲ್ಲಿ ಕವಿಯ ಪ್ರತಿಭೆ ಹೇಗೆ ಕಾರ್ಯಶೀಲವಾಗ ಬಹುದೆಂಬುದಕ್ಕೆ ಅವರ ಕಥಾಲೋಕ ಅಪೂರ್ವವಾದ ನಿದರ್ಶನಗಳನ್ನು ಮುಂದಿರಿಸುತ್ತದೆ. ಈಗಾಗೀ ಕುವೆಂಪು ಅವರು ನಮ್ಮ ಅನನ್ಯ ಕಥೆಗಾರರಲ್ಲಿ ಒಬ್ಬರಾಗಿ ಉಳಿಯುತ್ತಾರೆ"[3]

ಸನ್ಯಾಸಿ ಮತ್ತು ಇತರ ಕಥೆಗಳು ಒಟ್ಟು ಒಂಬತ್ತು ಕಥೆಗಳ ಸಂಗ್ರಹವಾಗಿದೆ. ಸನ್ಯಾಸಿ, ಕ್ರಿಸ್ತನಲ್ಲ ಪಾದ್ರಿಯ ಮಗಳು, ಈಶ್ವರನು ನಕ್ಕಿರಬೇಕು, ಆರಾಣಿ ಮೂರು ಕಾಸು, ಯಾರು ಅರಿಯದ ವೀರ, ಹೋಳಿಗೆ ಪ್ರತಿಜ್ಞೆ, ಮಾಯದ ಮನೆ, ದೆವ್ವದ ಕಾಟ, ಶ್ರೀಮನ್ನೂಕವಾಗಿ ಮುಂತಾದವು ಕಥೆಗಳನ್ನು ಒಳಗೊಂಡಿವೆ.

ಸನ್ಯಾಸಿ ಕಥೆಯಲ್ಲಿ ಒಲ್ಲದ ಮನಸ್ಸಿನಿಂದ ಇಂದಿರೆಯ ಕೈ ಹಿಡಿದ ರಮೇಶ ತಂದೆ ತಾಯಿಯರ ಬಲವಂತಕ್ಕೆ ವಿವಾಹವಾಗಿ ಮನೆ ಬಿಟ್ಟು ಹೋಗುವನು. ಇದರಿಂದ ಇಂದಿರೆಯ ಬಾಳು ಮರುಭೂಮಿಯಾಯಿತು. ಪತಿ ಅವಳನ್ನು ತೊರೆದ ನಂತರ ಎಲ್ಲರೂ ಕಡೆಗಣ್ಣಿನಿಂದ ನೋಡತೊಡಗಿದರು. ತನ್ನ ಪತಿಯಾಗಿ ಮಾರುವೇಷ ತೊಟ್ಟು ಪುರುಷನಾಗಿ ಬದಲಾವಣೆ ಹೊಂದಿ ಪ್ರೇಮಾನಂದರ ಶಿಷ್ಯರಾಗಿ ತನ್ನ ಪ್ರತಿಯನ್ನು ಪುನಃ ಪಡೆಯುವಳು. "ಕೈ ಹಿಡಿದವಳನ್ನು ದುಃಖ ಸಾಗರಕ್ಕೆ

[3]ಪ್ರಧಾನ ಗುರುದತ್ತ. (2023). *ಕುವೆಂಪು.* ಪುಟ. 80

ಕಲ್ಲು ಕಟ್ಟಿ ಎಸೆಯುವುದಕ್ಕಿಂತ ಮಹಾ ಪಾಪ ಬೇರಿಲ್ಲ" ಎಂದು ಪತಿಯ ಮನವೊಲಿಸಿದಳು. ಇಲ್ಲಿ ಆಚಲ ವಿಶ್ವಾಸಿ ಹೆಣ್ಣು ಮಗಳು ಪತ್ನಿಯನ್ನು ಪಡೆಯುವ ಅಪೂರ್ವ ಕಥೆಯಿದೆ.

ಕ್ರಿಸ್ತನಲ್ಲ ಪಾದ್ರಿಯ ಮಗಳು ಇದು ವಿಭಿನ್ನ ಕಥಾಹಂದರವನ್ನು ಹೊಂದಿದೆ. ಉನ್ನತ ವ್ಯಕ್ತಿತ್ವವನ್ನು ಹೊಂದಿದ್ದ ವ್ಯಕ್ತಿಯೊಬ್ಬನನ್ನು ಪಾದ್ರಿಯ ಮಗಳು ನಾಶ ಮಾಡುವಳು. ಕ್ರಿಸ್ತಮತವನ್ನು ವಿರೋಧಿಸುತ್ತಿದ್ದ ನಾಯಕ ಅವಳ ಮೋಹಕ್ಕೆ ಸಿಲುಕಿ ಜಾರ್ಜ್ ವಿಲಿಯಂ ಆಗುವವನು ತನ್ನ ಆಸ್ತಿಯನ್ನೆಲ್ಲ ಅವಳಿಗೆ ದಾನ ಮಾಡುವವನು. ಅಂತಿಮವಾಗಿ ನಿರ್ಗತಿಕನಾಗಿ ಬೀದಿ ಬೀದಿ ಅಲೆಯುತ್ತ ಯಾರಿಗೂ ತಿಳಿಯದಂತೆ ತನ್ನ ಜೀವನವನ್ನು ಕೊನೆಗೊಳಿಸಿಕೊಳ್ಳುವನು.

ಈಶ್ವರನೂ ನಕ್ಕಿರಬೇಕು ಇದು ಹಾಸ್ಯಭರಿತ ಕಥೆಯಾಗಿದೆ. ಪರಿಸ್ಪರ ನ್ಯೂನ್ಯತೆಯನ್ನು ಹೊಂದಿದ ಗಂಡು ಹೆಣ್ಣು ಅದನ್ನು ಮುಚ್ಚಿ ಹಾಕಲು ಪಡುವ ಪ್ರಯತ್ನ ಮತ್ತು ಇಬ್ಬರು ತಮ್ಮ ನ್ಯೂನ್ಯತೆಗಳನ್ನು ತಿಳಿದ ನಂತರ ಹೊಂದಿಕೊಂಡು ಸಂಸಾರವನ್ನು ಸಾಗಿಸಿದರು. ನಾಗರಾಜ ಮತ್ತು ಲಲಿತ ಇಬ್ಬರು ತಮ್ಮ ನ್ಯೂನ್ಯತೆಗಳನ್ನು ಒಪ್ಪುವರು. ಲಲಿತಳ ಕಣ್ಣಿನಿಂದ ಹರಿದ ಬಿಂದುಗಳನ್ನು ನೋಡಿ "ಇದೇನು ಲಲಿತ ಈ ಬೆಳದಿಂಗಳಲ್ಲಿ ಆಳುವುದೇ ನೀನು ನಿರ್ಭಾಗ್ಯೆಯಲ್ಲ ನನ್ನ ಭಾಗ್ಯದ ಲಕ್ಷ್ಮಿ! ಎಂದು ಅವಳನ್ನು ಸಂತೈಸುವನು.

ಆರಾಣೆ ಮೂರು ಕಾಸು ಕತೆಯಲ್ಲಿ ನವಾಬನನ್ನು ಕೈಹಿಡಿದ ಸ್ತ್ರೀ ಅವನ ಆಸ್ತಿಯೆಲ್ಲ ಸರ್ಕಾರದ ಪಾಲಾದಾಗ ಬೀದಿಗೆ ಬೀಳುವಳು. ಅವಳು ಉಡಲು ಬಟ್ಟೆ ಇಲ್ಲದೆ ಉಣಲು ಅನ್ನವಿಲ್ಲದೆ ಮಲಗಲು ತಾವಿಲ್ಲದೆ ಭಿಕ್ಷೆಯಿಂದ ಕಾಲಹರಣ ಮಾಡಿದರು ತನ್ನ ಪತಿಯನ್ನು ತೊರೆದು ಎಲ್ಲಿಯೂ ಹೋಗುವುದಿಲ್ಲ. ಕಷ್ಟ ಕಾಲದಲ್ಲಿಯೂ ನವಾಬನ ಜೊತೆ ಇರುವಳು.

ಯಾರು ಅರಿಯದ ವೀರ ಇಲ್ಲಿ ಪ್ರವಾಹದ ಸೆಳೆತಕ್ಕೆ ಸಿಲುಕಿ ನಾಶವಾಗುವ ಆಸ್ತಿಪಾಸ್ತಿಯನ್ನು ಕಂಡು ಮರುಗುವ ಸ್ತ್ರೀ ಪಾತ್ರವಿದು ಸುಬ್ಬಣ್ಣಗೌಡರ ಹೆಂಡತಿ ನಾಗಮ್ಮ ಲಿಂಗನನ್ನು ಕುರಿತು "ಹೊಳೆ ಬಹಳ ಬಂದಿದೆ ಏನು ಎಂದು ಪ್ರಶ್ನಿಸುವಳು. ಸೀತೆ ನೀರಲ್ಲಿ ಮುಳುಗಿದ ರಾಮನ ವಿಷಯವನ್ನು ಕುರಿತು ಪ್ರಶ್ನಿಸಿದಾಗ ಏನು ಆಗಲಿಲ್ಲ ನೀ ಉಣ್ಣ ಸುಮ್ಮನೆ" ಎಂದು ಹೇಳುವಳು. ಸುಬ್ಬಣ್ಣಗೌಡರನ್ನು "ಬಳ್ಳೆ ಹಾಕಿದೆ" ನೀವು ಊಟ ಮಾಡಿ ಎನ್ನುವಳು. ಪ್ರವಾಹ ಹೇರ ತೊಡಗಿದಾಗ ಎಲ್ಲರನ್ನೂ ಎಚ್ಚರಿಸಿದ ಸೋಮಕ್ಕ ಪೆಟ್ಟಿಗೆ ತರಲು ಹೋಗಿ ನೀರಿನಲ್ಲಿ ಮುಳುಗುವಳು ಅವಳ ಮಗಳು ದಾಸಮ್ಮ ತಾಯಿಯ ಆಸೆಯನ್ನು ಬಿಟ್ಟು ಹೊರಡುವಳು.

ಮಾಯದ ಮನೆ ಹಣದ ಆಸೆಗೆ ತುತ್ತಾಗಿ ಬಡ ರೋಗಿಗಳ ಜೀವ ತಿನ್ನುವ ವೈದ್ಯರ ಪಾತ್ರವಿದೆ. ಸುರೇಂದ್ರಬಾಬುವಿನ ಸಹಾಯಕಿಯಾದ ಶಶಿಮುಖಿ ಹಣದ ಆಸೆಯಿಂದ ನಡುರಾತ್ರಿಯಲ್ಲಿ ರೋಗಿಗಳನ್ನು ನೋಡಲು ತೆರಳುವಳು. ಅಲ್ಲಿ ದೆವ್ವಗಳ ಮಧ್ಯೆ ಸಿಲುಕಿಕೊಂಡು ಮಹಡಿಯಿಂದ ಬಯಕ್ಕೆ ಕೆಳಗೆ ಧುಮುಕುವಳು ಅಂತಿಮವಾಗಿ ನೆರೆಹೊರೆಯವರು ಅವಳನ್ನು ರಕ್ಷಿಸುವರು. ದೆವ್ವಗಳು ವೈದ್ಯರೇ ಫೀಜು ಎಂದು ಕೂಗಿ ಕರೆಯುತ್ತಿದ್ದವು.

ದೆವ್ವದ ಕಾಟ ಕತೆಯು ಮುತ್ತಣ್ಣ ಮತ್ತು ರಂಗರಾಯರ ಸುತ್ತ ಹೆಣೆದಿದೆ. ಮನೆಗೆಲಸದವನಾಗಿದ್ದ ಮುತ್ತಣ್ಣ ಯಜಮಾನರ ಸಲುಗೆಯನ್ನು ದುರುಪಯೋಗ ಮಾಡಿಕೊಂಡು ಮನೆಯ ಮೇಲೆ ಕಲ್ಲು ತೂರಾಟ ನಡೆಸುವನು ತೀರ್ಥಹಳ್ಳಿಯಲ್ಲಿದ್ದ ಗೌಡರ ಕುಟುಂಬದವರನ್ನು ಹಿಂದುರುಗಿ ಕಳುಹಿಸುವನು.

"ಶ್ರೀಮನ್ನೂಕವಾಗಿತ್ತು" ಇದು ರಂಗನ ಬಡ ಸಂಸಾರಸಾಗಿಸುವ ನಾಗಿಯ ಕುಟುಂಬ. ಗಂಡ ಮನೆಗೆ ಬಂದಾಗ ಕೈಕಾಲು ತೊಳೆಯಲು ಬಿಸಿನೀರು ಕೊಟ್ಟು ಊಟಮಾಡಲು ಬಳ್ಳೆಯನ್ನು ಹಾಕುವಳು ನಂತರ ಎಮ್ಮೆ ಕರುವಿನ ಕೂಗನ್ನು ಕೇಳಿ ಗಂಡ

ಎಮ್ಮೆ ಮನೆಗೆ ಬಂದಿಲ್ಲವಾ ಎಂದಾಗ "ಹೌದು ನಾನು ಇಲ್ಲೆಲ್ಲಾ ಸುತ್ತಮುತ್ತ ಹುಡುಕಿದೆ ಎಲ್ಲೂ ಕಾಣಲಿಲ್ಲ ಅದರ ಕರುವಿಗೆ ಬೇರೆ ಏನೋ ಖಾಯಿಲೆ ಮಲಗಿದಲ್ಲಿಂದ ಏಳೊದಿಲ್ಲ" ಏನೂ ಕೊಟ್ಟರೂ ತಿನ್ನೋದಿಲ್ಲ ಎಂದಳು. ಅವನು ಹೋದ ನಂತರ ಭೂತನಿಗೆ ಮೂರು ಕಾಸು ಸುಳಿದಿಟ್ಟು ಎಮ್ಮೆ ಸಿಕ್ಕಿದರೆ ಒಂದು ಕೋಳಿ ಕೊಡುವುದಾಗಿ ಹರಕೆ ಹೊತ್ತುಕೊಂಡಳು ಅಂತಹ ಮುಗ್ದೆ ನಾಗಿ.

ಕುವೆಂಪು ಅವರು ರಚಿಸಿದ ಹದಿನೇಳು ಕಥೆಗಳಲ್ಲಿ ಸಾಲದ ಮಗು, ಯಾರು ಅರಿಯದ ವೀರ, ಶ್ರೀ ಮನ್ಮೂಕವಾಗಿತ್ತು ಕಲೆಯ ಹಾಗೂ ಮಾನವೀಯತೆಯ ದೃಷ್ಟಿಯಿಂದ ಶ್ರೇಷ್ಠ ಕಥೆಗಳು. ಅಲ್ಲಿಯ ಹೃದಯ ವಿದ್ರಾವಕ ಸನ್ನಿವೇಶಗಳು ಓದುಗರನ್ನು ಕುತೂಹಲದ ಮೊನೆಯ ಮೇಲೆ ನಿಲ್ಲಿಸಿ ತಳಮಳ ಗಟ್ಟಿಸುತ್ತವೆ. ಅವು ಕರುಣ ರಸದ ಮಡುಗಳಾಗಿದ್ದು, ಭಾಷೆಯೂ ಭಾವದ ಆರ್ದ್ರತೆಯಿಂದ ಮಿಡಿಯುತ್ತದೆ. ನಿಸರ್ಗ ವರ್ಣನೆ ನಿಸರ್ಗಪ್ರಿಯರಾದ ಕುವೆಂಪು ಅವರ ಶೈಲಿಯ ಹೆಗ್ಗಳಿಕೆ ಹಾಗೂ ಅದರ ನಿಶಾನೆ ಆ ವರ್ಣನೆ ಕೆಲವೊಮ್ಮೆ ಅತಿಯನ್ನುವಷ್ಟರಮಟ್ಟಿಗೂ ದಾಟುತ್ತದೆ. ಆದರೆ ಕಥಾ ನಿರೂಪಣೆಯಲ್ಲಿ ಅವರಿಗೆ ಸಮಯ ಪ್ರಜ್ಞೆಯಿದೆ. ಕ್ರಿಯೆ ಜಡವಾಗಬಾರದೆಂಬ ಓದುಗನ ಕುತೂಹಲ ಪ್ರಚೋದನೆಗೆ ವಿಘ್ನ ಬರಬಾರದೆಂಬ ಕಲಾವಂತಿಕೆಯ ಜಾಣ್ಮೆಯೂ ಇದೆ.[4] ಎಂಬುದನ್ನು ನಾವಿಲ್ಲಿ ತಿಳಿಯಬಹುದು.

ಈ ಎಲ್ಲ ಕಥೆಗಳನ್ನೂ ಓದಿಯಾದ ನಂತರ ಕುವೆಂಪುರವರು ತಾವು ಬರೆದ ಬೆರಳೆಣಿಕೆಯಷ್ಟು ಕಥೆಗಳಲ್ಲಿ ತಂದ ವಸ್ತು ವೈವಿಧ್ಯತೆ, ಬಳಸಿದ ತಂತ್ರಗಾರಿಕೆ, ಆಶಯ, ವಿಚಾರ, ಚಿಂತನೆ, ಬಯಕೆ, ನಿರೀಕ್ಷೆ, ಒಲವು ಎಲ್ಲವೂ ಮಂಥನ ಯೋಗ್ಯವೆನಿಸುತ್ತವೆ. ಒಬ್ಬ ಬರಹಗಾರನ ಮನೋಧರ್ಮ ಮತ್ತು ವ್ಯಕ್ತಿತ್ವ ಅವನ ಕಥೆಯ ಭೂಮಿಕೆಯನ್ನು ನಿರ್ದೇಶಿಸುತ್ತದೆ ಎನ್ನುವುದು ಕುವೆಂಪು ಅವರಿಂದಲೂ ವೇದ್ಯವಾಗುತ್ತದೆ.

**ಆಕರ ಗ್ರಂಥಗಳು**


- ಕುವೆಂಪು. (2014). *ನನ್ನ ದೇವರು ಮತ್ತು ಇತರ ಕಥೆಗಳು.* (19ನೇ ಮುದ್ರಣ), ಉದಯರವಿ ಪ್ರಕಾಶನ
- ಕುವೆಂಪು. (2013). *ಸನ್ಯಾಸಿ ಮತ್ತು ಇತರ ಕಥೆಗಳು.* (19ನೇ ಮುದ್ರಣ), ಉದಯರವಿ ಪ್ರಕಾಶನ


**ಪರಾಮರ್ಶನ ಗ್ರಂಥಗಳು**


- ದೇಜಗೌ. ಕುವೆಂಪು ಸಾಹಿತ್ಯ ವಿಲೋಕನ. ಪ್ರಸಾರಾಂಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ.
- ದೇಜಗೌ. (2011). *ಮಹಾಕವಿ ಕುವೆಂಪು ದರ್ಶನ.* ಪ್ರಸಾರಾಂಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ.
- ಪ್ರಧಾನ ಗುರುದತ್ತ. (2023). *ಕುವೆಂಪು.* ನವ ಕರ್ನಾಟಕ ಪಬ್ಲಿಕೇಷನ್ಸ್.
- ಶ್ರೀಕಂಠ ಕೂಡಿಗೆ. *ಕುವೆಂಪು ಕಥಾ ಕಥನ.* ಸಿಜಿವಿ ಇಂಡಿಯಾ.


[4]ದೇಜಗೌ.(2011).ಮಹಾಕವಿ ಕುವೆಂಪು ದರ್ಶನ. ಪುಟ. 470